

ಕೈಕಾಲುಗಳು, ಕುಂಡೆಯ ಸುತ್ತ ಬಿಗಿದಿದ್ದ ಕಚ್ಚೆ, ಅದಕ್ಕೆ ಕಟ್ಟಿದ್ದ ಅಂಡುಕೊಕ್ಕೆ, ಮೈಮೇಲಿದ್ದಿದ್ದಕ್ಕೆ ಅಂಗಿಯೆಂದು ಕರೆಸಿಕೊಳ್ಳುವ ಅರಿವೆ, ಒಂದಿಷ್ಟು ಕೆಂಪಾಗಿ ಒಂದಿಷ್ಟು ಉದುರಿದ ಹಲ್ಲುಗಳು, ಕುತೂಹಲದ ಕಣ್ಣುಗಳು, ಅರ್ಧ ಬೋಳಾದ ನೆತ್ತಿ, ಉಳಿದರ್ಧ ಕೂದಲುಗಳು ಹಣ್ಣಾಗಿದ್ದ ಹಣ್ಣು ಜೀವವದು. 'ನಿಮ್ಮ ಪ್ರಾಯ ಎಷ್ಟು' ಎಂದು ಕೇಳಿದರೆ ಶತಮಾನಗಳ ಲೆಕ್ಕದಲ್ಲೇ ಉತ್ತರ ಕೊಡುತ್ತಿದ್ದ ಆತ ಕಡುಕಷ್ಟದಲ್ಲಿ ಮಾಗಿ ಹಣ್ಣಾದಂತೆ ಕಾಣುತ್ತಿದ್ದ. ಮನಸ್ಸಿಗೆ ನೆಮ್ಮದಿ ಇದ್ದರೂ ಕಾಡು ಜೀವನ ಕಷ್ಟ- ಎಂದು ನಮಗನ್ನಿಸುತ್ತಿತ್ತು, ಅವನಿಗಲ್ಲ.

ಒಂದಂಕಿ ಕಾಡಿನಲ್ಲಿ ನಮ್ಮೊಂದಿಗೆ ಓಡಾಡುತ್ತಿದ್ದವ ಕಾನನದ ಹಲವು ಚೋದ್ಯಗಳನ್ನು ತೋರಿಸುತ್ತಿದ್ದ. ಯಾವ ದಾರಿಯಲ್ಲಿ ಹೋದರೆ ಯಾವ ಹಾವುಗಳು ಹೆಚ್ಚು ಸಿಕ್ಕಾವು ಎಂಬುದರಿಂದ ಹಿಡಿದು ನೀರಲ್ಲಿಯ ಮೀನಿನ ಹೆಜ್ಜೆಯವರೆಗೆ ಕಾಡಿನ ನರ-ನಾಡಿ ಬಲ್ಲವ. ಒಮ್ಮೆ ಹೀಗೇ ಏನೋ ಮಾತಾಡುತ್ತಾ, 'ಓ ಅಲ್ಲಿ... ಆ ಗುಡ್ಡದ್ ಒರೀಲಿ ಇಳೀತದೆ ಬೆಳೀಹೊಳೆ. ಈಗ ಮಳಿಗಾಲಕ್ ಹ್ವಾದ್ರೆ ಬೆಳಿಯಲ್ರ, ಕೆಂಪೀ ಹೊಳೆ. ಹಾಂಗೆ ಅಕ್ತಂಗೀರ್ ಗುಂಡಿದಾಸ್ ಬಂದ್ರೆ ನಮ್ ಕುದ್ರೆಜಡ್ಡಿವರೀಗೂ ಹಾಯ್ಲಾಲು' ಎಂದೆಲ್ಲಾ ಅಲ್ಲಿನ ಹೊಳೆಗಳು ಒಂದನ್ನೊಂದು ಎಲ್ಲಿ, ಹೇಗೆ ಕೂಡುತ್ತವೆ ಎಂಬ ನಕ್ಷೆ ನೀಡುತ್ತಿದ್ದ. ಅಂವ ಹೇಳಿದ ಅಕ್ತಂಗೀರ್ ಗುಂಡಿ ಎಂಬ ಶಬ್ದ ಥಕ್ಕನೆ ನನ್ನ ಗಮನ ಸೆಳೆಯಿತು.

'ಅಕ್ತಂಗೀರ್ ಗುಂಡಿ ಅಂದ್ರೆ...?' ನಡುವೆಯೇ ತಡೆದು ಕೇಳಿದೆ.

'ಅಂದೊಂದ್ ಗುಂಡಿಯಪ. ಮತ್ತೆಂತಿಲ್ರ' ಎನ್ನುತ್ತಾ ಲಗುಬಗೆಯಿಂದ ಮತ್ತೊಂದು ಸುದ್ದಿ ತೆಗೆದ. 'ಅದ್ಯಾನಮ್ಮಿ ಗುಂಡಿ ಮಾರಾಯ! ಹೋಗ್ ನೋಡ್ಕ